ಉತ್ತರಿಸುವ ಸಚಿವರು ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿ ಕಾನ್ಸ್‌ಟೇಬಲ್ ದರ್ಜೆಯ ಒಟ್ಟು ಪೊಲೀಸ್ ಸಿಬ್ಬಂದಿಗಳ ಸಂಖ್ಯೆ ಎಷ್ಟು?

ಆ) ಅವರಿಗೆ ರವಿವಾರದಂದು ವಾರದ ರಜೆಯನ್ನು ಪಡೆದುಕೊಳ್ಳುವ ಅವಕಾಶವಿದೆಯೇ?

ಇ) ಹಾಗಿದ್ದಲ್ಲಿ ಈ ರಜೆಯನ್ನು ಮಂಜೂರು ಮಾಡದೆ ನಿರಾಕರಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ ಈ ನಿಟ್ಟಿನಲ್ಲಿ ಕೈಗೊಳ್ಳಲಾದ ಕ್ರಮಗಳಾವುವು?

ಉತ್ತರ

ಅ) 40,525

ಆ) ಇದೆ

ಇ) ತುರ್ತು ಸಂದರ್ಭಗಳ ಹೊರತಾಗಿ ರಜೆಯನ್ನು ನಿರಾಕರಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಈ) ಉದ್ಭವಿಸುವುದಿಲ್ಲ

ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು ಬಸ್ ಡಿಪೋ ಹಾಗೂ ಗ್ರಾಮಾಂತರದಲ್ಲಿ ಬಸ್ ಸಂಚಾರ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 47(12)

ಸದಸ್ಯರ ಹೆಸರು ಶ್ರೀ ಕೃಷ್ಣಮೂರ್ತಿ ಎ ಆರ್ (ಸಂತೇಮಾರನಹಳ್ಳಿ)

ಉತ್ತರಿಸುವ ಸಚಿವರು ಶ್ರೀ ಸಿ ಆರ್ ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

1) ನೂತನ ಚಾಮರಾಜನಗರ ಜಿಲ್ಲಾ ಕೇಂದ್ರಕ್ಕೆ ಬಸ್ ಡಿವೋ ಮಂಜೂರಾಗಿದೆಯೇ?

2) ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ತಾಲ್ಲೂಕು ಮತ್ತು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕನ್ನೊಳಗೊಂಡ ನಂತೇಮರಳ್ಳಿ ಕ್ಷೇತ್ರದ ವ್ಯಾಪ್ತಿಯ ಗ್ರಾಮೀಣ ಪ್ರದೇಶದಲ್ಲಿ ಎಷ್ಟು ಸರ್ಕಾರಿ ಬಸ್ಸುಗಳು ಸಂಚರಿಸುತ್ತಿವೆ ಅವುಗಳ ಮಾರ್ಗದಲ್ಲಿ ಯಾವ ಯಾವ ಗ್ರಾಮಗಳಲ್ಲಿ ನಿಲುಗಡೆ ಇರುತ್ತದೆ ಅವುಗಳ ಮಾರ್ಗ ಸಂಖ್ಯೆ ಎಷ್ಟು?

3) ಯಾವ ಯಾವ ಗ್ರಾಮದಲ್ಲಿ ಬಸ್ ತಂಗುವ ವ್ಯವಸ್ಥೆಯನ್ನು ಮಾಡಲಾಗಿದೆ, ಹಾಲಿ ಇದ್ದ ಮಾರ್ಗಗಳಲ್ಲಿನ ಯಾವುದಾದರೂ ಬಸ್ಸುಗಳನ್ನು ನಿಲ್ಲಿಸಲಾಗಿದೆಯೇ? ನಿಲ್ಲಿಸಿದ್ದಲ್ಲಿ ಕಾರಣವೇನು ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುವುದಿಲ್ಲವೆ ತೊಂದರೆಯಾಗಿದ್ದಲ್ಲಿ ತೊಂದರೆ ನಿವಾರಣೆಗೆ ಕೈಗೊಂಡಿರುವ ಬದಲಿ ಕ್ರಮ ಏನು?

ಉತ್ತರ

1) ಚಾಮರಾಜ ನಗರ ಜಿಲ್ಲೆಯು ರಾಷ್ಟ್ರೀಕರಣಗೊಂಡಿಲ್ಲದ ವಲಯದಲ್ಲಿದೆ ಹಾಲಿ ಗುಂಡ್ಲುಪೇಟೆ ಮತ್ತು ಕೊಳ್ಳೆಗಾಲಗಳಲ್ಲಿ ಘಟಕಗಳು ಕಾರ್ಯ ನಿರ್ವಹಿಸುತ್ತಿರುತ್ತದೆ ಆದುದರಿಂದ ಚಾಮರಾಜ ನಗರದಲ್ಲಿ ಘಟಕ ನಿರ್ಮಿಸುವ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ

2) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ನಂತೇಮಾರನಹಳ್ಳಿ ವಿಧಾನಸಭಾ ಕ್ಷೇತ್ರ ಮತ್ತು ಅದರ ಮುಖಾಂತರ ಪ್ರತಿದಿನ 89 ಅನುಸೂಚಿಗಳನ್ನು ಕಾರ್ಯಚರಣೆಗೊಳಿಸುತ್ತಿರುತ್ತದೆ ಇವುಗಳಲ್ಲಿ 20 ಸಾಮಾನ್ಯ ಮತ್ತು 36 ವೇಗದೂತ ಅನುಸೂಚಿಗಳಾಗಿರುತ್ತದೆ ಸಾಮಾನ್ಯ ಅನುಸೂಚಿಗಳು ಅವುಗಳ ಮಾರ್ಗಗಳ ಎಲ್ಲಾ ಹಳ್ಳಿಗಳಲ್ಲಿಯೂ ನಿಲುಗಡೆಯನ್ನು ಹೊಂದಿರುತ್ತದೆ ಮತ್ತು ವೇಗದೂತ ಅನುಸೂಚಿಗಳಿಗೆ ನಿಗಧಿತ ನಿಲುಗಡೆಯನ್ನು ನೀಡಲಾಗಿರುತ್ತದೆ ವಿವರಗಳನ್ನು ಅನುಬಂಧ-ಆನಲ್ಲಿ ಇರುತ್ತದೆ ಉಳಿದ 32 ವೇಗದೂತ ಸೇವೆಗಳು, ನಂತೇಮಾರನಹಳ್ಳಿ ಶಾಸನ ಸಭಾ ಕ್ಷೇತ್ರದ ಮುಖಾಂತರ ಸಂಚರಿಸಿದರೂ ಸಹ ಈ ಕ್ಷೇತ್ರದ ಯಾವುದೇ ಸ್ಥಳದಲ್ಲಿ ನಿಲುಗಡೆ ನೀಡಲಾಗಿರುವುದಿಲ್ಲ

3) 6 ಸ್ಥಳಗಳಲ್ಲಿ ರಾತ್ರಿ ತಂಗುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಅವು ಯಾವುದೆಂದರೆ, ತರದಾಲೆ, ಹೆಮ್ಮರಗಲು, ನೇರಲೆ, ದೇವನೂರ್, ಬಿಳಿಗಿರಿರಂಗನ ಬೆಟ್ಟ

ಉಮ್ಮತ್ತೂರ್

ಬೆಂಗಳೂರು-ಟಿ ನರಸೀಪುರ, ಕುದೇರು, ವೇಗದೂತ ಸಾರಿಗೆಯು ಅನುಸೂಚಿ ಸಂಖ್ಯೆ ಘಟಕ 1 61ನ್ನು ದಿನಾಂಕ 13-9-2001 ರಿಂದ ಟಿ ನರಸೀಪುರ ಮತ್ತು ಕುದೇರು ನಡುವೆ ಸಾಕಷ್ಟು ಪ್ರಯಾಣಿಕರು ಇಲ್ಲದ ಕಾರಣ ಟಿ ನರಸೀಪುರದವರೆಗೆ ಕಾರ್ಯಚರಣೆ ಗೊಳಿಸಲಾಗುತ್ತಿದೆ ಈ ಮಾರ್ಗವು ರಾಷ್ಟ್ರೀಕೃತದಲ್ಲದ ವಲಯದಲ್ಲಿದ್ದು ಖಾಸಗಿ ಪ್ರವರ್ತಕರುಗಳ ಬಸ್ಸುಗಳು ಕಾರ್ಯಚರಣೆಯಲ್ಲಿರುತ್ತದೆ

ಖಾಸಗಿ ಸಾರಿಗೆ ಸಂಸ್ಥೆಯೊಂದರ ಎರಡು ಬಸ್ಸುಗಳಿಗೆ ಒಂದೇ ನೋಂದಣಿ ಸಂಖ್ಯೆಯನ್ನು ನಮೂದಿಸಿರುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 48(206)

ಸದಸ್ಯರ ಹೆಸರು ಶ್ರೀ ಸುರೇಶ್‌ಕುಮಾರ್ ಎಸ್ (ರಾಜಾಜಿನಗರ)

ಉತ್ತರಿಸುವ ಸಚಿವರು ಶ್ರೀ ಸಿ ಆರ್ ಸಗೀರ್ ಅಹಮದ್(ಸಾರಿಗೆ ಸಚಿವರು)

ಪ್ರಶ್ನೆ

ಅ ಬೆಂಗಳೂರಿನ ಖಾಸಗಿ ಸಾರಿಗೆ ಸಂಸ್ಥೆಯೊಂದು ತನ್ನ ಎರಡು ಬಸ್ಸುಗಳಿಗೆ ಒಂದೇ ನೋಂದಣಿ ಸಂಖ್ಯೆಯನ್ನು ನಮೂದಿಸಿಕೊಂಡು ಸಂಚರಿಸುತ್ತಿದ್ದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ ಬಂದಿದ್ದಲ್ಲಿ, ಈ ಸಂಸ್ಥೆಯ ವಿರುದ್ಧ ಕ್ರಮ ಜರುಗಿಸಲಾಗಿದೆಯೇ?

ಇ ರಾಜ್ಯದಲ್ಲಿ ಎಷ್ಟು ಈ ರೀತಿಯ ವಂಚನೆ ಪ್ರಕರಣಗಳು ದಾಖಲಾಗಿವೆ?

ಈ ಅಂತಹ ವಾಹನಗಳ ಒಡೆತನ ಹೊಂದಿದ ಸಂಸ್ಥೆಗಳಾವುವು? ಅವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?

ಉತ್ತರ

ಅ ಬಂದಿದೆ

ಆ ಆರಕ್ಷಕ ಠಾಣೆಗಳಲ್ಲಿ ಮೊಖದ್ದಮೆಯು ದಾಖಲಾಗಿದ್ದು ತನಿಖೆಯು ಪ್ರಗತಿಯಲ್ಲಿದೆ